# ದಕ್ಷಿಣಾಪಥೇಶ್ವರ ಇಮ್ಮಡಿ ಪುಲಿಕೇಶಿ ಮತ್ತು ಅರಬ್ಬರು

**ಶಿವಾನಂದ ರಂ. ನಾಗಣ್ಣವರ**

ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ವಿ.ಎಂ.ಕೆ.ಎಸ್.ಆರ್.ವಸ್ತ್ರದ ಕಲಾ, ವಿಜ್ಞಾನ ಹಾಗೂ ವಿ.ಎಸ್.ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯ, ಹುನಗುಂದ.

**DOI: https://doi.org/10.5281/zenodo.18008001**

## ABSTRACT:

ಬಾದಾಮಿಯನ್ನು ರಾಜಧಾನಿಯಾಗಿಸಿಕೊಂಡು ಸುಮಾರು 2 ಶತಮಾನಗಳವರೆಗೆ ವೈಭವದಿಂದ ರಾಜ್ಯಭಾರ ಮಾಡಿದ ಕನ್ನಡದ ಪ್ರಸಿದ್ಧ ಸಾಮ್ರಾಜ್ಯ ಚಾಲುಕ್ಯರ ಸಾಮ್ರಾಜ್ಯ. ರಣರಾಗ-ಜಯಸಿಂಹರಿಂದ ಉದಯವಾದ ಈ ಸಾಮ್ರಾಜ್ಯವು ಇಮ್ಮಡಿಯ ಪುಲಿಕೇಶಿಯ ಕಾಲಾವಧಿಯಲ್ಲಿ ಭಾರತದಾಚೆ ತನ್ನ ಪ್ರಭುತ್ವವನ್ನು ಸಾಧಿಸಿತ್ತು. ಇಮ್ಮಡಿ ಪುಲಿಕೇಶಿ ಸಾಮ್ರಾಜ್ಯದ ಅತ್ಯಂತ ಬಲಿಷ್ಠ ಹಾಗೂ ಪ್ರಭಾವಶಾಲಿ ರಾಜನಾಗಿದ್ದನು ಈತನ ಆಡಳಿತಾತ್ಮಕ ಕಾರ್ಯಗಳಿಂದ ಭಾರತದ ರಾಜಕೀಯ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಮಹತ್ವದ ಸ್ಥಾನವನ್ನು ಪಡೆದಿತ್ತು. ಈ ಅವಧಿಯಲ್ಲಿ ಭಾರತದತ್ತ ದಾಳಿಗೆ ಹವಣಿಸುತ್ತಿದ್ದ ಅರಬ್ಬರನ್ನು ಹಿಮ್ಮೆಟ್ಟಿಸಿದ, ಅರಬ್ಬ ನಾಡಿನಲ್ಲಿಯೂ ಭಾರತೀಯ ವ್ಯಾಪಾರಿಗಳ ರಕ್ಷಣೆ ಮಾಡಿದ ನಾಯಕ. ಅಲ್ಲದೇ ಭಾರತ ಮತ್ತು ಅರಬ್ಬ ವಾಣಿಜ್ಯ ವ್ಯವಸ್ಥೆಗೆ ಭದ್ರವಾದ ಅಡಿಪಾಯವನ್ನು ಹಾಕಿ ಸ್ನೇಹತ್ವವನ್ನು ಸ್ಥಾಪಿಸಿದ ದೊರೆ. ಅರಬ್ಬ ನಾಯಕ ಇಮ್ಮಡಿ ಖುಸ್ರುವಿನೊಂದಿಗೆ ರಾಯಭಾರತ್ವದ ಸಂಬಂಧವನ್ನು ಬೆಳೆಸುವುದರ ಮೂಲಕ ಆರ್ಥಿಕ ಸಮೃದ್ಧತೆಯನ್ನು ಸಾಧಿಸಿದ ನಾಯಕನೆಂಬ ಕೀರ್ತಿಗೆ ಭಾಜನನಾಗಿದ್ದಾನೆ.

## KEYWORDS:

ಪುರುಮಿಸ, ಅಲ್‌ಕಥಾ, ಸಸಾನೆಟ್, ಬೈಜಾಂಟಿಯನ್, ಮಾರಿಸ್, ಅರ್ಕ-ಅಲ್-ಹಿಂದ್, ಐಹೊಳೆಯ ಐನೂರ್ವರ್, ಪಲ್ಸ್-ಅಲ್-ಹಿಂದ್.

## ಪ್ರಸ್ತಾವನೆ:

ಬಾದಾಮಿ ಚಾಲುಕ್ಯ ಮನೆತನದ ನಿಜವಾದ ಸಂಸ್ಥಾಪಕ, ಪರಧರ್ಮ ಹಿತಸಾಧಕ, ಸಾಹಿತ್ಯ ಪೋಷಕ, ಕಲೆ ಮತ್ತು ವಾಸ್ತುಶಿಲ್ಪಕಲೆಯ ಆರಾಧಕ ಇಮ್ಮಡಿ ಪುಲಿಕೇಶಿ. ಚಾಲುಕ್ಯ ಮನೆತನದಲ್ಲಿ ಯಾರೂ ಧರ್ಮ ಮಾರ್ಗವನ್ನು ಉಲ್ಲಂಘಿಸಿರಲಿಲ್ಲ. ಆದರೆ ಮಂಗಳೇಶನು ನಿಯಮವನ್ನು ಉಲ್ಲಂಘಿಸಿ ತನ್ನ ಮಗನಿಗೆ ಅಧಿಕಾರವನ್ನು ಪಡೆದಿದ್ದನು. ಆದಕಾರಣ ಪ್ರಾಪ್ತವಯಸ್ಸಿಗೆ ಬಂದ ಯರೆಯಪ್ಪನು ('ಅಪರುದ್ಧಚರಿತವ್ಯವಸಾಯ ಬುದ್ಧಿ'ಯಾದನೆಂದೂ- ಅಂದರೆ ಓಡಿ ಕಾಡಿಗೆ ಸೇರಿದನು ಎಂಬುದು) ತನ್ನ ಚಿಕ್ಕಪ್ಪನಾದ ಮಂಗಳೇಶನನ್ನು ಪರಾಭವಗೊಳಿಸುವುದರ ಮೂಲಕ ಚಾಲುಕ್ಯ ಸಾಮ್ರಾಜ್ಯದ ಸಿಂಹಾಸನವನ್ನು ಏರಿದನು. ವಿರೋಧಿಗಳನ್ನು ನಿಗ್ರಹಿಸಿದನು. ದಕ್ಷಿಣೋತ್ತರದಲ್ಲಿ ಬಂಡಾಯವೆದ್ದ ಬಂಡಾಯಗಾರರ ಬೇರನ್ನು ಕಿತ್ತೆಸೆದು ಕಾವೇರಿಯಿಂದ ನರ್ಮದೆಯವರೆಗೆ ರಾಜ್ಯ ವಿಸ್ತರಣೆ ಮಾಡಿದನು. ಸಾಮ್ರಾಜ್ಯ ಕಟ್ಟುವವರೆಲ್ಲ ಸಾಮ್ರಾಟರೆ ಆದರೆ ಸಾಮ್ರಾಟರಿಗೆ ಸಾಮ್ರಾಟನಾದವನು ಎರಡನೇ ಪುಲಿಕೇಶಿ. ಕನ್ನಡ ನಾಡಿನ ಗಂಡೆದೆಯ ಧೈರ್ಯವನ್ನು, ಹಗೆಗಳಿಗೆ ಪರಿಚಯಿಸಿದನು. ಆತನ ನಾಯಕತ್ವದಲ್ಲಿ ಎಲ್ಲೆಲ್ಲೂ ವಿಜಯ ಪತಾಕೆಯನ್ನು ನೆಟ್ಟು ವಿಜಯ ದುಂದುಭಿಯನ್ನು ಮೊಳಗಿಸಿದ ವೀರರ ಸೈನ್ಯವು 'ಕರ್ನಾಟಕದ ಬಲ'ವೆಂದು ಕೀರ್ತಿಗೆ ಪಾತ್ರವಾಯಿತು. ಅರಬ್ಬಿ ಸಮುದ್ರದಿಂದ ಬಂಗಾಲ ಕೊಲ್ಲಿಯವರೆಗೂ ಅಂದರೆ ಎರಡು ಸಮುದ್ರಗಳಿಂದ ಸುತ್ತುವರೆದ 1200 ಮೈಲಿಯಷ್ಟು ವಿಸ್ತಾರದ ಪ್ರದೇಶಕ್ಕೆ ಸುಮಾರು 80 ಸಾವಿರ ಹಳ್ಳಿಗಳಿಂದ ಕೂಡಿದ

ದೊಡ್ಡ ಸಾಮ್ರಾಜ್ಯಕ್ಕೆ ಸಾರ್ವಭೌಮನಾದನು, ಕನ್ನಡ ನಾಡು ನುಡಿಯನ್ನು ಉಳಿಸಿ ಬೆಳೆಸುವ ಹಟದೊಂದಿಗೆ ಹೋರಾಡಿದನು. ಕ್ರಿ.ಶ.618ರಲ್ಲಿ ದೇಶದಾಚೆಯೂ ದಿಗ್ವಿಜಯವನ್ನು ಸಾಧಿಸಿ ಅಫಘಾನ್, ಇರಾನ್ ರಾಷ್ಟ್ರಗಳಿಗೂ ಭಯವನ್ನು ಉಂಟುಮಾಡಿದ ನಾಯಕ ಭಾರತದ ಸನಾತನ ಸಂಸ್ಕೃತಿಯನ್ನು ಕಾಪಾಡಿದ ಕನ್ನಡಿಗ ಚಾಲುಕ್ಯ ಚಕ್ರವರ್ತಿ ಎರಡನೇ ಪುಲಿಕೇಶಿ.

**ಪುಲಿಕೇಶಿಯ ಬಾಲ್ಯ ಮತ್ತು ಬೆಳವಣಿಗೆ:**

ಬಾದಾಮಿ ಚಾಲುಕ್ಯ ದೊರೆಯಾದ ಒಂದನೇ ಕೀರ್ತಿವರ್ಮ ಹಾಗೂ ಸಿರಿಯಬ್ಬೆ ಎಂಬ ರಾಜದಂಪತಿಗಳಿಗೆ ಕ್ರಿ.ಶ.578ರಲ್ಲಿ ಗಂಡು ಮಗು ಜನಿಸಿತು. ಸಂತಸಗೊಂಡ ಸಿರಿಯಬ್ಬೆಯು ತನ್ನ ಮಗನು ಉತ್ತರೋತ್ತರವಾಗಿ ಬೆಳೆಯಲಿ ಎಂಬ ಉದ್ದೇಶದಿಂದ ಮಗುವಿಗೆ ಯರೆಯಣ್ಣ (ಎರೆಯಣ್ಣ) ಎಂದು ನಾಮಕರಣ ಮಾಡಿದಳು. ಎರೆಯ ಎಂದರೆ ಒಡೆಯ ಪ್ರಭು ಎಂದರ್ಥ. ಯರೆಯಣ್ಣನು ಜನಿಸಿದ ಕೆಲವೇ ವರ್ಷಗಳಲ್ಲಿ ತಂದೆ ಕೀರ್ತಿವರ್ಮನು ಮರಣ ಹೊಂದಿದನು. ಅದರಿಂದ ಅವನ ನಾಲ್ವರು ಮಕ್ಕಳನ್ನು ಬೆಳೆಸುವ ಜವಾಬ್ದಾರಿ ರಾಣಿಯಾದ ಸಿರಿಯಬ್ಬೆಯ ಮೇಲೆಯೇ ಬಿತ್ತು. ಅದಾವುದಕ್ಕೂ ಅಳುಕದ ಸಿರಿಯಬ್ಬೆ ತನ್ನ ಮಕ್ಕಳಾದ ಎರೆಯಣ್ಣ, ಕುಬ್ಜವಿಷ್ಣುವರ್ಧನ, ಧಾರಾಶ್ರಯ ಜಯಸಿಂಹ ಮತ್ತು ಬುದ್ಧವರ್ಷರಿಗೆ ಯಾವುದೇ ಕೊರತೆಯಾಗದಂತೆ ಕ್ಷತ್ರಿಯರಿಗೆ ಯೋಗ್ಯವಾದ ರೀತಿಯಲ್ಲಿ ಬೆಳೆಸಿದಳು. ಬಾಲಕರಿದ್ದಾಗಲೇ ಅವರಿಗೆ ಯುದ್ಧವಿದ್ಯೆ, ಮೊದಲಾದ ಶಿಕ್ಷಣದಲ್ಲಿ ತರಬೇತಿಯನ್ನು ನೀಡಲು ಅನುಭವಿಕರಾದ ಕೃಷ್ಣಸೋಮಯಾಜಿ ಎಂಬ ಗುರುಗಳನ್ನು ನೇಮಿಸಿದಳು. ಈ ನಾಲ್ಕು ಮಕ್ಕಳಲ್ಲಿ ಬಾಲ್ಯದಿಂದಲೂ ಚತುರನಾಗಿಯೇ ಬೆಳೆದ ಯರೆಯಣ್ಣನಿಗೆ ಕತ್ತಿವರಸೆ, ಮಲ್ಲಯುದ್ಧ, ಕುದುರೆ ಸವಾರಿ ಎಂದರೆ ತುಂಬಾ ಆಸಕ್ತಿ, ಇದರಿಂದ ಕೃಷ್ಣಸೋಮಯಾಜಿಗೆ ಶಸ್ತ್ರಾಸ್ತ್ರ ವಿದ್ಯೆಯನ್ನು ಕಲಿಸಲು ಯಾವುದೇ ತೊಂದರೆಯಾಗಲಿಲ್ಲ. ಅಲ್ಪಾವಧಿಯಲ್ಲಿಯೇ ಪರಿಪೂರ್ಣ ಯುದ್ಧ ನಿಪುಣನಾಗಿ ಬೆಳೆದನು ಈ ಎರೆಯಣ್ಣ. ಕೀರ್ತಿವರ್ಮನು ಮರಣ ಹೊಂದಿದ ತರುವಾಯ ಅಧಿಕಾರ ವಹಿಸಿಕೊಂಡ ಅವನ ಸಹೋದರನೂ ಎರೆಯಣ್ಣನ ಚಿಕ್ಕಪ್ಪನೂ ಆದ ಮಂಗಳೇಶನು. ಪರಾಕ್ರಮಿಯಾದ ಮಂಗಳೇಶನು ಚಾಲುಕ್ಯ ಸಾಮ್ರಾಜ್ಯದ ವಿರುದ್ಧ ಬಂಡೆದ್ದ ಬಂಡಾಯಗಾರರ ಬಂಡಾಯವನ್ನು ಶಮನ ಮಾಡಿದನು. ಅಲ್ಲದೆ ಅಂತಹ ಅರಸರನ್ನು ತನ್ನ ಸಾಮಂತರನ್ನಾಗಿ ಮಾಡಿಕೊಳ್ಳುತ್ತ, ಅವರಲ್ಲಿ ಚಾಲುಕ್ಯ ಸಾರ್ವಭೌಮನ ಬಗ್ಗೆ ಭಯವನ್ನುಂಟು ಮಾಡಿ ಚಾಲುಕ್ಯರ ಕೀರ್ತಿಯನ್ನು ಹೆಚ್ಚಿಸುತ್ತಿದ್ದನು.

ಕಾಲಕ್ರಮೇಣ ಪುಲಿಕೇಶಿ ಸಹೋದರರ ಪ್ರಾಪ್ತವಯಸ್ಸಿಗೆ ಬಂದಾಗ ಮಂಗಳೇಶ ಅಧಿಕಾರವನ್ನು ಬಿಟ್ಟುಕೊಡದೆ ಹೋದಾಗ ತನ್ನ ಸಹಚರರೊಂದಿಗೆ ಕಾಳಾಮುಖರೂ, ಗೊರವರು, ಕಾಪಾಲಿಕರೂ ನೆಲೆಸಿದ್ದ ಕೋಲಾರ ಜಿಲ್ಲೆಯ ಬಾನವಾಡಿಗೆ ಬಂದನು. (ಪ್ರಕಾಶ ಹೇಮಾವತಿ : ಇಮ್ಮಡಿ ಪುಲಿಕೇಶಿ, ಪುಟ.16) ಅಲ್ಲಿಯೇ ಯುದ್ಧ ತರಬೇತಿಯನ್ನು ಪಡೆದುಕೊಂಡು ಚಿಕ್ಕಪ್ಪನ ವಿರುದ್ಧ ಬಂಡಾಯವೆದ್ದು ಆಂಧ್ರದ ಅನಂತಪುರದ ಬಳಿಯಿರುವ 'ಏಳ್ಪಟ್ಟುಸಿಂಬಿಗೆ' ಎಂಬ ಗ್ರಾಮದ ಬಳಿ ಹೋರಾಟಕ್ಕಿಳಿದನು ಪುಲಿಕೇಶಿಯ ಸೈನ್ಯವನ್ನು ಎದುರಿಸಲಾಗದೇ ಮಂಗಳೇಶನು ಸೋತು ಹತನಾದನು. ವಿಜೇತನಾದ ಎರೆಯಣ್ಣನು ತನ್ನ ಚಿಕ್ಕಪ್ಪನ ಮೃತದೇಹವನ್ನು ವಾತಾಪಿಗೆ ತಂದು ರಾಜಗೌರವಗಳೊಂದಿಗೆ ಸಂಸ್ಕಾರ ಮಾಡಿದನು. ತನ್ನ ನೂತನ ಸೈನ್ಯದೊಂದಿಗೆ ಮಂಗಳೇಶನ ಸೈನ್ಯವನ್ನು ಒಂದಾಗಿಸಿ ಸುಸಜ್ಜಿತ ಬಲಿಷ್ಠವಾದ ಸೈನ್ಯಬಲವನ್ನು ಹೆಚ್ಚಿಸಿಕೊಂಡು ಅದನ್ನು 'ಕರ್ನಾಟ ಬಲ' ಎಂದು ನಾಮಕರಣ ಮಾಡಿದನು. ಮಗನ ದಿಗ್ವಿಜಯದ ಸುದ್ದಿ ತಿಳಿದು, ಸಂತೋಷಗೊಂಡ ಸಿರಿಯಬ್ಬೆಯು ಸಾ.ಶ.ಮ 609ರ (ಭಾದ್ರಪದ ಶುಕ್ಲ 1, ಶಕ ಸಂವತ್ 532) ಕೃಷ್ಣಪೌರ್ಣಿಮೆಯ ದಿನದಂದು

ಸಕಲ ವೈಭವದಿಂದ ಎರೆಯಣ್ಣನಿಗೆ 'ಇಮ್ಮಡಿ ಪುಲಿಕೇಶಿ' ಎಂಬ ನಾಮಕರಣದೊಂದಿಗೆ ಪಟ್ಟಾಭಿಷೇಕ ಮಹೋತ್ಸವವನ್ನು ನೆರವೇರಿಸಿ ರತ್ನಸಿಂಹಾಸನದ ಮೇಲೆ ಕೂಡ್ರಿಸಿದರು. (ಎಸ್.ವಿ.ಶ್ರೀನಿವಾಸರಾವ್, ಇಮ್ಮಡಿ ಪುಲಿಕೇಶಿ, ಪುಟ.26) ಪಟ್ಟಾಭಿಷೇಕದ ಸ್ಮರಣೆಗಾಗಿ ಪುಲಿಕೇಶಿಯು ನಂದನೂರು ಅಗ್ರಹಾರದ ಮಹಾಜನಗಳಿಗೆ ಆ ಗ್ರಾಮವನ್ನೇ ದಾನಬಿಟ್ಟನೆಂದು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಗೂಟಿ ತಾಲೂಕಿನ ಪೆದ್ದವಡಗೂರು ಶಾಸನ ಹೇಳುತ್ತದೆ. (ಕರ್ನಾಟಕದ ಇತಿಹಾಸ, ಪುಟ.165, M.E.R.No.343 of 1920) ತನ್ನ ಮಾವನಾದ ಒಂದನೇ ಪುಲಿಕೇಶಿಯ ಗುಣ, ವ್ಯಕ್ತಿತ್ವ, ಪ್ರಾಮಾಣಿಕತೆಯನ್ನು ಎರೆಯಣ್ಣನು ಮೈಗೂಡಿಸಿಕೊಂಡಿದ್ದನು. ಅದರಿಂದ ಅವನಿಗೆ ಸಿರಿಯಬ್ಬೆಯು ಪುಲಿಕೇಶಿ ಎಂದೇ ನಾಮಕರಣ ಮಾಡಿಸಿದಳು. ಸಿಂಹಾಸನಾಧೀಶನಿಗೆ ಗೌರವಿಸುವ ಉದ್ದೇಶದಿಂದ ಸಂಬಂಧಿಗಳೂ ಮತ್ತು ಕೊಂಕಣದ ಉತ್ತರ ಭಾಗವನ್ನಾಳುತ್ತಿದ್ದ ಬಪ್ಪೂರವಂಶದ ಸತ್ಯಾಶ್ರಯ ಧ್ರುವರಾಜ ಇಂದ್ರವರ್ಮನೂ ಪುಲಿಕೇಶಿಯ ಹೆಸರಿನಲ್ಲಿಯೇ ದಾನದತ್ತಿಗಳನ್ನು ನೀಡಿದರೆಂದು ಕ್ರಿ.ಶ.610ರ ಗೋವೆಯ ತಾಮ್ರಶಾಸನವು ತಿಳಿಸುತ್ತದೆ. (ಅದೇ, ಪುಟ.162; J.B.B.R.A.S.Vol.X.p.348)

**ಪುಲಿಕೇಶಿಯ ಸೈನಿಕ ಸಾಧನೆಗಳು:**

**ಕಪ್ಪೆ ಅರಭಟ್ಟನ್ ಶಿಷ್ಟಜನಪ್ರಿಯನ್ ಕಷ್ಟಜನವರ್ಜಿತನ್ ಕಲಿಯುಗ ವಿಪರೀತನ್**
**ವರನ್ ತೇಜಸ್ವಿನೋ ಮೃತ್ಯುರ್ ನ ತು ಮಾನ-ಅವಖಂಡನಂ**
**ಮೃತ್ಯುಸ್ ತತ್ಕ್ಷಣಿಕೋ ದುಃಖಮ್ ಮಾನಭಂಗಂ ದಿನೇ ದಿನೇ**
**ಸಾಧುಗೆ ಸಾಧು ಮಾಧುರ್ಯ್ಯಂಗೆ ಮಾಧುರ್ಯ್ಯಂ ಬಾಧಿಪ್ಪ ಕಲಿಗೆ**
**ಕಲಿಯುಗ ವಿಪರೀತನ್ ಮಾಧವನ್ ಈತನ್ ಪೆರನಲ್.**

**(SII.XV.451, ಬಾ.ಸಾಂ.ಅ.16, ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ.9,ಬಾ.343)**

ಕಪ್ಪೆ ಅರಭಟ್ಟನು ಜನಾನುರಾಗಿಯಾಗಿ ಜನರ ಕಷ್ಟಕಾಲದಲ್ಲಿ ನೆರವಾಗುವವನು, ಆಪದ್ಬಾಂದವನಂತಿದ್ದ ಈತನು ಒಳ್ಳೆಯವರಿಗೆ ಒಳ್ಳೆಯವನಾಗಿ, ಆತ್ಮೀಯರಿಗೆ ಪ್ರೀತಿಪಾತ್ರನಾದವನಾಗಿ ತೊಂದರೆ ಕೊಡುವವರಿಗೆ ಸಿಂಹಸ್ವಪ್ನನಾಗಿದ್ದ ಈತನು ಮಹಾಭಾರತದ ಕೃಷ್ಣನಂತೆ ದುಷ್ಟರನ್ನು ಶಿಕ್ಷಿಸುವ ಶಿಷ್ಟರನ್ನು ರಕ್ಷಿಸುವ ವಿಷ್ಣುವೇ ಆಗಿದ್ದನು ಎಂಬ ಕಪ್ಪೆ ಅರಭಟ್ಟನ ಶಾಸನದ ಸಾರದಂತೆ ಪುಲಿಕೇಶಿಯ ಜೀವನದುದ್ದಕ್ಕೂ ಅದೇ ರೀತಿಯಾಗಿ ಬದುಕಿದವನಾಗಿದ್ದನು. ತನ್ನ ಸಾಮ್ರಾಜ್ಯದ ವಿರುದ್ಧ ಬಂಡೆದ್ದ ಬಂಡಾಯಗಾರರನ್ನು ಸದೆಬಡೆದು ಶರಣಾಗತರಾದವರೊಂದಿಗೆ ಸ್ನೇಹತ್ವವನ್ನು ಬೆಳೆಸುವ ನೀತಿಯನ್ನು ತನ್ನ ಆಡಳಿತದುದ್ದಕ್ಕೂ ಅನುಸರಿಸಿಕೊಂಡು ಬಂದ ನಾಯಕನಾಗಿದ್ದನು.

ಚಾಲುಕ್ಯ ನಾಡಿನ ಸಾರ್ವಭೌಮತ್ವವನ್ನು ದಿಕ್ಕರಿಸಿ ಸ್ವಾತಂತ್ರ್ಯ ಘೋಷಿಸಿಕೊಂಡಿದ್ದ ರಾಷ್ಟ್ರಕೂಟ ಪ್ರಮುಖರಾಗಿದ್ದ ಅಪ್ಪಾಯಿಕ ಗೋವಿಂದರನ್ನು, ಬನವಾಸಿಯ ಕದಂಬ ದೊರೆ ಭೋಗಿವರ್ಮನನ್ನು ಸೋಲಿಸಿ, ಆಳ್ವಕೇಡದ ಆಳೂಪರ ಮೇಲೆ ವಿಜಯ ಸಾಧಿಸಿ ಆಳೂಪ ರಾಜಕುಮಾರಿಯಾದ ಕದಂಬ ಮಹಾದೇವಿಯನ್ನು ವಿವಾಹವಾದನು, ಆಳುಪ ಮತ್ತು ಪುಲಿಕೇಶಿಯರ ಸಂಬಂಧವನ್ನು ಐಹೊಳೆ ಶಾಸನವು ಹೀಗೆ ಪ್ರಸ್ತುತಪಡಿಸಿದೆ.

**ಗಂಗಾಳುಪ್ರೇಂದ್ರಾವ್ಯಸನಾದಿ ಸಪ್ತಹಿತ್ವಾ ಪುರೋಪಾರ್ಜ್ಜಿತ ಸಂಪದೋಪಿ ।**
**ಯಸ್ಯಾನುಭಾವೋಪಾನತಾಸ್ಸದಾಸನ್ನಾ ಸನ್ನ ಸೇವಾಮೃತ ಪಾನಶೌ ಂಡಾಃ ॥**

**(Ep.Ind.Vol.VI. Sloka-19)**

ಅಂದರೆ ಸಪ್ತ ಪಾಪಗಳನ್ನು ವರ್ಜಿಸಿ ಸುಖವನ್ನು ಆರ್ಜಿಸಿದ್ದರೂ ಅವನ

(ಸಾರ್ವಭೌಮನ) ಗಾಂಭೀರ್ಯದ ಪಾಶಕ್ಕೊಳಗಾದ ಗಂಗಾ ಮತ್ತು ಆಳುಪ ಅರಸರು ಸದಾ ಅವನ ಸನ್ನಿಧಾನ ಸಾಮಿಪ್ಯದ ಸುಖಾಮೃತ ಪಾನಿಗಳಾಗಿದ್ದರು" ಎಂದರ್ಥ. ಮುಂದುವರೆದು ತಲಕಾಡಿನ ಗಂಗರೊಂದಿಗೆ ಸ್ನೇಹ ಬೆಳೆಸಿಕೊಂಡು ಗಂಗ ಮತ್ತು ಆಳೂಪರ ನೆರವನ್ನು ಪಡೆದುಕೊಂಡು ಕೊಂಕಣದ ಮೌರ್ಯರ ಮೇಲೆ ದಾಳಿಯನ್ನಿಟ್ಟು ಅವರ ಅಧೀನದಲ್ಲಿರುವ ರೇವತಿ ಹಾಗೂ ಪುರಿ ದ್ವೀಪ ಪ್ರದೇಶಗಳನ್ನು ಪಡೆದನು. ಈ ಎರಡೂ ದ್ವೀಪಗಳನ್ನು ಪುಲಿಕೇಶಿಯು ತನ್ನ ಪ್ರಮುಖ ಸೇನಾ ನೆಲೆಯನ್ನಾಗಿಸಿಕೊಂಡನು. ಪುರಿ ದ್ವೀಪವನ್ನು ಪ್ರಸ್ತುತ ಮುಂಬೈ ಸಮೀಪದಲ್ಲಿರುವ ಎಲಿಫೆಂಟಾ ದ್ವೀಪವೆಂದು ಕರೆಯಲಾಗಿದೆ. (ಜಿ.ಯಾಜ್‌ದಾನಿ, 1982, ದಿ ಅರ್ಲಿ ಹಿಸ್ಟರಿ ಆಫ್ ಡೆಕ್ಕನ್, ದೇಹಲಿ ಪು.240) ಯುದ್ಧಾನಂತರ ಈ ವಿಜಯದ ಸ್ಮರಣೆಗಾಗಿ ಮಹಾನದಿಯ ಉತ್ತರದ ದಂಡೆಯಲ್ಲಿದ್ದ ಪಿರಿಗಿಪ್ಪ ಗ್ರಾಮವನ್ನು ದ್ರಾವಿಡ ವಿಷಯದಲ್ಲಿ ವಾಸ ಮಾಡುತ್ತಿದ್ದ ಓರ್ವ ಬ್ರಾಹ್ಮಣೋತ್ತಮನಿಗೆ ದಾನವಾಗಿ ನೀಡಿದನೆಂದು ಕಾಂದಲಗಾಂವದ ತಾಮ್ರಶಾಸನ ತಿಳಿಸುತ್ತದೆ. (Ind.Ant.XIV.330) ರೇವತಿ ದ್ವೀಪದ ಜವಾಬ್ದಾರಿಯನ್ನು ಪುಲಿಕೇಶಿಯು ತನ್ನ ಅಜ್ಜಿಯಾದ ದುರ್ಲಭಾದೇವಿಯು ಬಾಪ್ಪುರ ವಂಶದ ಧ್ರುವರಾಜ ಇಂದ್ರವರ್ಮನಿಗೆ ವಹಿಸಿದನು. (ಪ್ರಕಾಶ ಹೇಮಾವತಿ : ಇಮ್ಮಡಿ ಪುಲಿಕೇಶಿ, ಪುಟ.72)

ಪುಲಿಕೇಶಿಯ ಶೌರ್ಯವನ್ನು ಗಮನಿಸಿದ ಉತ್ತರದ ಲಾಟರು, ಮಾಳವರು ಮತ್ತು ಗುರ್ಜರರು ಪುಲಿಕೇಶಿಯ ಸಾರ್ವಭೌಮತ್ವವನ್ನು ಒಪ್ಪಿಕೊಂಡರು. (ಜಿ.ಯಾಜ್‌ದಾನಿ, 1982, ದಿ ಅರ್ಲಿ ಹಿಸ್ಟರಿ ಆಫ್ ಡೆಕ್ಕನ್, ದೇಹಲಿ ಪು.213) ಮತ್ತು ಆ ಭಾಗದ ಆಡಳಿತದ ಜವಾಬ್ದಾರಿಯನ್ನು ನಿಭಾಯಿಸಲು ತನ್ನ ಹತ್ತಿರದ ಸಂಬಂಧಿಯಾದ ವಿಜಯವರ್ಮನನ್ನು ನೇಮಿಸಿದನೆಂದು ಕೈರದತ್ತಿಯ ಶಾಸನವು ಪರಿಚಯವಾಗುತ್ತದೆ. ವಾಯವ್ಯ ಪ್ರದೇಶದ ರಾಜಪ್ರತಿನಿಧಿಯಾಗಿ ಸಹೋದರ ಜಯಸಿಂಹನನ್ನು ನೇಮಿಸಿದನು. (ಅದೇ, 71) ಉತ್ತರಾಪಥೇಶ್ವರನೆಂದು ಮೆರೆಯುತ್ತಿದ್ದ ಹರ್ಷವರ್ಧನನ್ನು ನರ್ಮದಾ ನದಿದಡದಲ್ಲಿ ಸೋಲಿಸಿ ಅವನೊಂದಿಗೆ ಸ್ನೇಹ ಬೆಳೆಸಿಕೊಂಡು ಬಂದನು. ಪೂರ್ವದಲ್ಲಿ ಕೋಸಲ ಕಳಿಂಗದ ಅಧಿಪತಿ ಮಹಾಶಿವಗುಪ್ತನನ್ನು ಸೋಲಿಸಿದನು.

**ಇಮ್ಮಡಿ ಪುಲಿಕೇಶಿ ಮತ್ತು ಅರಬ್ಬರ ನಡುವಿನ ಸಂಬಂಧ :**

ಪುಲಿಕೇಶಿಯು ಕೇವಲ ಕರ್ನಾಟಕ, ಭಾರತದಲ್ಲಿ ಮಾತ್ರವಲ್ಲದೆ ಭಾರತದಾಚೆಯೂ ತನ್ನ ಪ್ರಭುತ್ವವನ್ನು ಸಾಧಿಸಿ ವಿದೇಶಿಗರಲ್ಲಿಯೂ ನಡುಕ ಹುಟ್ಟಿಸಿ ವಿಶ್ವನಾಯಕನೆಂದೇ ಚಿರಪರಿಚಿತನಾದವನು. ಪ್ರಪ್ರಥಮವಾಗಿ ವಿದೇಶ ನೆಲದಲ್ಲಿ ನೌಕಾ ಕಾಳಗವನ್ನು ಮಾಡಿದ ಕನ್ನಡ ನಾಡಿನ ಹೆಮ್ಮೆಯ ಅರಸ ಎರಡನೇ ಪುಲಿಕೇಶಿ. ಪುಲಿಕೇಶಿಯು ಪರ್ಶಿಯಾದ ಸಾಮ್ರಾಟನಾದ ಎರಡನೆಯ ಖೂಸ್ರುವಿನೊಂದಿಗೆ ರಾಜತಾಂತ್ರಿಕ ಸಂಬಂಧ ಹೊಂದಿದ್ದನೆಂದು, (ಸಾಲೆತೊರೆ ಬಿ.ಎ., ಇಂಡಿಯನ್ ಡಿಪ್ಲೋಮ್ಯಾಟಿಕ ರಿಲೇಷನ್ಸ್ ವಿತ್ ದಿ ಈಸ್ಟ್, ಬಾಂಬೆ, ಪು.181) ಮತ್ತು ಎರಡನೆ ಖುಸ್ರು ತನ್ನ ರಾಯಭಾರಿಯನ್ನು ಪುಲಿಕೇಶಿಯ ಆಸ್ಥಾನಕ್ಕೆ ಕಳುಹಿಸಿದ್ದನು. (ಜಿ.ಯಾಜ್‌ದಾನಿ, 1982, ದಿ ಅರ್ಲಿ ಹಿಸ್ಟರಿ ಆಫ್ ಡೆಕ್ಕನ್, ದೇಹಲಿ ಪು.240) ಸುಮಾರು 100 ಹಡಗುಗಳನ್ನು ಕಟ್ಟಿ ನೌಕಾಪಡೆಯನ್ನು ಬೆಳೆಸಿದ ಕೀರ್ತಿ ಈತನಿಗೆ ಸಲ್ಲುತ್ತದೆ. ಇಂದಿನ ಬೆಹರೇನ ಮತ್ತು ಕುವೈತ್ ಸೇರಿದ ಪ್ರದೇಶವನ್ನು 'ಅಲ್‌ಕಥಾ' ಎಂದು ಕರೆಯುತ್ತಿದ್ದರು ಇಲ್ಲಿ ಪುಲಿಕೇಶಿಯು ಸ್ಥಾಪಿಸಿದ ನೌಕಾನೆಲೆ ಇತ್ತೆಂಬುದರ ಕುರಿತಾದ ಪ್ರತೀತಿಗಳಿವೆ. ಇಲ್ಲಿರುವ ಅರಸನು ಕನ್ನಡಿಗನ ದಾಳಿಯ ಹೊಡೆತದಿಂದ ಕಂಗಾಲಾಗಿ ತಮ್ಮನ್ನು ತಾವು ರಕ್ಷಿಸಿಕೊಳ್ಳಲೆಂದೇ ಒಂದು ಕೋಟೆಯನ್ನು ಕಟ್ಟಿಕೊಂಡನು ಅದುವೇ ಇಂದಿನ ಬಾಸ್ರಾನಗರ. ಇದು ಪುಲಿಕೇಶಿಯ

ಭಯದಿಂದ ನಿರ್ಮಿತಗೊಂಡ ನಗರ ಎಂಬುದರಲ್ಲಿ ಸಂದೇಹವೇ ಇಲ್ಲ. ಆದುದರಿಂದ ಪುಲಿಕೇಶಿಯು ವಿಶ್ವಕನ್ನಡಿಗ ಮಹಾರಾಜನೆಂದರೆ ಅತಿಶಯೋಕ್ತಿಯಾಗಲಾರದು ಎಂದು ಇತಿಹಾಸ ಸಂಶೋಧಕ ಭುವನೇಶ್ವರ ಅಭಿಪ್ರಾಯಪಟ್ಟಿದ್ದಾರೆ.

ಏಳನೇ ಶತಮಾನದ ಅವಧಿಯಲ್ಲಿ ಏಷಿಯಾದಲ್ಲಿ ಹೇಗೆ ಚಾಲುಕ್ಯ ಸಾಮ್ರಾಜ್ಯ ಪ್ರಬಲವಾಗಿ ಮೆರೆಯುತ್ತಿತ್ತೋ ಹಾಗೆಯೇ ಯುರೋಪನ್ನು ಎರಡು ಪ್ರಸಿದ್ಧ ಸಾಮ್ರಾಜ್ಯಗಳು ಆಳುತ್ತಿದ್ದವು. ಅವುಗಳಲ್ಲಿ ಒಂದು ರೋಮ್ ಸಾಮ್ರಾಜ್ಯ, ಇದನ್ನು ಬೈಜಾಂಟಿಯನ್ ಸಾಮ್ರಾಜ್ಯವೆಂದು ಕರೆಯಲಾಗುತ್ತಿತ್ತು. ಮತ್ತೊಂದು ಇರಾನ್ ಮತ್ತು ಇರಾಕ್ ಒಳಗೊಂಡ 'ಸಸಾನೆಟ್' ಅಥವಾ ಪರ್ಷಿಯನ್ ಸಾಮ್ರಾಜ್ಯ. ಈ ಎರಡೂ ರಾಷ್ಟ್ರಗಳ ನಡುವೆ 25 ವರ್ಷಗಳವರೆಗೆ ನಿರಂತರ ಹೋರಾಟಗಳು ನಡೆಯುತ್ತಿದ್ದವು. ಕಾಲಾಂತರದಲ್ಲಿ ಬೈಜಾಂಟಿಯನ್ ಸಾಮ್ರಾಜ್ಯಕ್ಕೆ 'ಮಾರಿಸ್' ಎಂಬಾತನು ಅಧಿಪತಿಯಾದಾಗ ಆತನು ಪರ್ಷಿಯಾದ ದೊರೆಯನ್ನಾಗಿ ಖುಸ್ರು ಎಂಬಾತನನ್ನು ಅಧಿಕಾರಕ್ಕೆ ತಂದು ಅವನಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿ ಅವನ ಆಡಳಿತಕ್ಕೆ ಸಹಾಯ ನೀಡುತ್ತಿದ್ದನು. ಈ ಮದುವೆಯ ಮೂಲಕ ಸಸಾನೆಟ್ ಮತ್ತು ಬೈಜಾಂಟಿಯನ್ ದೊರೆಗಳ ನಡುವೆ ಇರುವ ವೈರತ್ವವು ಅಂತ್ಯಗೊಂಡು ಪರಸ್ಪರರು ಸಂಬಂಧಿಗಳಾದರು. ಆದರೆ ರೋಮಿನ ದಂಡಾಧಿಕಾರಿಯಾದ 'ಪೋಕಸ್' ಎಂಬಾತನು ರೋಮ್ ದೊರೆಯಾದ ಮಾರಿಸ್‌ನನ್ನು ಹತ್ಯೆ ಮಾಡಿದನು. ಇದರಿಂದ ಕ್ರಿ.ಶ.602 ರಿಂದ 628ರವರೆಗೆ ರೋಮ್ ಮತ್ತು ಪರ್ಷಿಯನ್‌ಗಳ ನಡುವೆ ಪುನಃ ನಿರಂತರ ಹೋರಾಟಗಳು ನಡೆಯುತ್ತಲೇ ಇದ್ದವು.

ಪ್ರಾರಂಭಿಕ ಹೋರಾಟಗಳಲ್ಲಿ ಖುಸ್ರುವಿಗೆ ವಿಜಯ ದೊರೆತಿದ್ದರೂ ರೋಮ್ ದೊರೆಯಾಗಿ ಬಂದಿದ್ದ ಹರ್ಮಿಜ್‌ನು ಪರ್ಷಿಯನ್ ಸೈನ್ಯವನ್ನು ಪರಾಭವಗೊಳಿಸುವಲ್ಲಿ ಯಶಸ್ವಿಯಾದನು. ಕ್ರಿ.ಶ.625ರ ಅವಧಿಯಲ್ಲಿಯೇ ಪರ್ಷಿಯಾದ ರಾಜಧಾನಿ ಸ್ಟಸಿಪನ್ ಆಗಿತ್ತು. ಅದರ ಸನಿಹದಲ್ಲಿರುವ 'ದಸ್ತಗೀರ' ಎಂಬ ಪ್ರದೇಶವನ್ನು ರೋಮನ್ನರು ತಮ್ಮ ಹಿಡಿತಕ್ಕೆ ತೆಗೆದುಕೊಂಡಿದ್ದರು. ಇದರಿಂದ ಖುಸ್ರುವಿಗೆ ಅಪಾರ ಪ್ರಮಾಣದ ಹಾನಿ ಸಂಭವಿಸಿತು. ಇಂತಹ ಗೊಂದಲದ ಸಂದರ್ಭದಲ್ಲಿಯೇ ಇಮ್ಮಡಿ ಪುಲಿಕೇಶಿಯು ಪರ್ಷಿಯಾದ ರಾಜಕೀಯವನ್ನು ಪ್ರವೇಶ ಮಾಡುತ್ತಾನೆ. ಅಂದು ಭಾರತದಲ್ಲಿಯೇ ಪ್ರಸಿದ್ಧವಾದ 'ಐಹೊಳೆಯ ಐನೂರ್ವರ ವ್ಯಾಪಾರಿ ಸಂಘದ ವರ್ತಕರು' ತಮ್ಮ ವ್ಯಾಪಾರದ ಚಟುವಟಿಕೆಗಳನ್ನು ದಿನದಿಂದ ದಿನಕ್ಕೆ ವಿಸ್ತರಿಸುತ್ತಾ ಆರ್ಥಿಕವಾಗಿ ಪ್ರಾಬಲ್ಯ ಸಾಧಿಸಿದ್ದರು. ಆದಕಾರಣ ಕ್ರಿ.ಶ.625ರ ಅವಧಿಯಲ್ಲಿ ಭಾರತೀಯ ವರ್ತಕರ ಮೇಲೆ ಈ ಪರ್ಷಿಯನ್ನರು ಭಾರವಾದ ವ್ಯಾಪಾರಿ ತೆರಿಗೆಗಳನ್ನು ಮತ್ತು ವಿಭಿನ್ನವಾದ ಕಠಿಣ ವ್ಯಾಪಾರಿ ನಿರ್ಬಂಧಗಳನ್ನು ವಿಧಿಸಿದ್ದರು. ಈ ವಿಷಯವನ್ನು ಪುಲಿಕೇಶಿಯ ಆಸ್ಥಾನಕ್ಕೆ ಭೇಟಿ ನೀಡಿದ ಅರಬ್ಬ ಪ್ರವಾಸಿ ತಬರಿಯು ತನ್ನ ವರದಿಯಲ್ಲಿ ದಾಖಲಿಸಿದ್ದನು. 'ಅರ್ಕ-ಅಲ್-ಹಿಂದ್' (ಭಾರದ ವಸಾಹತು ಪ್ರದೇಶ) ಎಂದು ಕರೆಯಲಾಗುತ್ತಿದ್ದ ಆಲ್ಟಾಪೆನಿಸುಲಾ ಇರಾನಿಗೆ ಸನಿಹದಲ್ಲಿದ್ದ ಪ್ರಮುಖ ಸಮುದ್ರವಾಗಿತ್ತು. ಅರಬ್ ನಾಡಿನ ಈ ಕರಾವಳಿ ಪ್ರದೇಶವನ್ನು 'ಪಲ್ಸ್-ಅಲ್-ಹಿಂದ್' (ಭಾರತದ ಪ್ರವೇಶದ್ವಾರ) ಎಂದು ಕರೆಯಲಾಗುತ್ತಿತ್ತು, ಆ ಭಾಗದಲ್ಲಿ ಭಾರತೀಯ ವರ್ತಕರ ವ್ಯಾಪಾರ ದಿನದಿಂದ ದಿನಕ್ಕೆ ಅಭಿವೃದ್ಧಿ ಹೊಂದುತ್ತಾ ಸಾಗಿತ್ತು. ಈ ವ್ಯಾಪಾರ ಮತ್ತು ವಾಣಿಜ್ಯ ಕ್ಷೇತ್ರದ ಮೇಲೆ ಐಹೊಳೆಯ ಐನೂರ್ವರ ವ್ಯಾಪಾರಿ ಸಂಘದವರು ನಿಯಂತ್ರಣ ಹೊಂದಿದ್ದರು. ಇದರಿಂದ ಭಾರತೀಯ ವರ್ತಕರು ತುಂಬಾ ಸಮಸ್ಯೆಗಳನ್ನು ಎದುರಿಸುತ್ತಿದ್ದರು. ತನ್ನ ನಾಡಿನ ವರ್ತಕರ ಚಿಂತಾಜನಕ ಸ್ಥಿತಿಯನ್ನು ಗಮನಿಸಿದ ಇಮ್ಮಡಿ ಪುಲಿಕೇಶಿಯು ಇರಾನ್‌ದ ಮೇಲೆ ತನ್ನ ದೃಷ್ಟಿಯನ್ನು ಹರಿಸಿದನು. ತನ್ನ ಬಲಿಷ್ಠ ನೌಕಾಪಡೆಯೊಂದಿಗೆ ಅತ್ತ ದಂಡೆತ್ತಿ ಬಂದ

ಪುಲಿಕೇಶಿಯು ನಿರಂತರ ಯುದ್ಧಗಳನ್ನು ಕೈಗೊಂಡಿದ್ದನೆಂದು ತಬರಿ ದಾಖಲಿಸುತ್ತಾನೆ. [ಆಲ್ ಹಿಂದದ ದೊರೆಯು, ಅಂದರೆ ಪುಲಿಕೇಶಿಯು, ಕ್ರಿ.ಶ.625ರಲ್ಲಿ ಈ ಭಾಗದ ಮೇಲೆ ಸರಣಿ ನೌಕಾಯುದ್ಧಗಳನ್ನು ಮಾಡಿದ್ದನು] ಇದಾದ ಕೆಲವೇ ಅವಧಿಯಲ್ಲಿ ಪುಲಿಕೇಶಿಯು ಪರ್ಶಿಯನ್ ನಾಡಿನಲ್ಲಿರುವ ಭಾರತೀಯ ವರ್ತಕರ ಜೀವನದ ಕುರಿತು ಅಧ್ಯಯನ ಮಾಡಲು ತನ್ನೋರ್ವ ರಾಯಭಾರಿಯನ್ನು ನಿಯೋಜಿಸಿದನು. ಈ ರಾಯಭಾರಿಯ ಜೊತೆಯಲ್ಲಿ ಎರಡನೆಯ ಖುಸ್ರು ಮತ್ತು ಅವನ ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೂ ಕೊಡಲು ಒಂದೊಂದು ಕಾಣಿಕೆಗಳನ್ನು ಮತ್ತು ರಹಸ್ಯ ಪತ್ರಗಳನ್ನು ಕಳುಹಿಸಿದನು. ತನ್ನ 36ನೇ ವರ್ಷದಲ್ಲಿ ಪುರುಮಿಸನು (ಪುಲಿಕೇಶಿಯು) ನಮಗೆ ಸಾಕಷ್ಟು ಪತ್ರಗಳನ್ನು ಮತ್ತು ಉಡುಗೊರೆಗಳನ್ನು ಕಳುಹಿಸಿದ್ದಾನೆ ಎಂದು ಖುಸ್ರುವಿನ ಮಾತಿನಲ್ಲಿಯೇ ಅರಬ್ ಇತಿಹಾಸಕಾರ ತಬರಿ ದಾಖಲಿಸಿದ್ದಾನೆ. (ಶಾಸ್ತ್ರಿ. ಕೆ.ಎನ್. : ಫಾರಿನ್ ನೋಟಿಸಸ್ ಆಫ್ ಸೌತ್ ಇಂಡಿಯಾ, ಮದ್ರಾಸ್, ಪುಟ.106) ಆ ಉಡುಗೊರೆಗಳೆಂದರೆ ಆನೆಗಳು, [ನಮ್ಮ ಸಾಮ್ರಾಜ್ಯದ ಶಕ್ತಿ ಹೀಗಿದೆ, ನಮಗೆ ಯಾವಾಗಲೂ ಶರಣಾಗಿಯೇ ಇರಬೇಕು ಎಂದೋ ಅಥವಾ ನಿನಗೆ ತೊಂದರೆಯಾದಾಗ ನನ್ನ ಗಜಪಡೆಗಳು ನಿನ್ನ ನೆರವಿಗೆ ಬರುತ್ತವೆ ಎಂಬ ಸಂಕೇತವಾಗಿಯೂ ಇರಬಹುದು. ಯಾಕೆಂದರೆ ನಿನ್ನ ವಿರುದ್ಧ ಈಗಾಗಲೇ ಯುದ್ಧಗಳು ನಡೆಯುತ್ತಿವೆ] ಖಡ್ಗಗಳು, [ಖಡ್ಗಗಳು– ನಮ್ಮ ಶಕ್ತಿಯ ಪ್ರಬಲತೆ ಹೀಗಿದೆ ಅಥವಾ ನಿನಗೆ ಬೆಂಬಲಿಗನಾಗಿ ನಿಲ್ಲುತ್ತೇವೆ ಎಂದು ತಿಳಿಸಲೋ ಅಥವಾ ನಮಗೆ ತಿರುಗಿ ಬಿದ್ದರೆ ಅದೇ ಖಡ್ಗದಿಂದ ನಿಮ್ಮನ್ನು ಹತ್ತಿಕ್ಕಲಾಗುವುದು ಎಂಬ ಅರ್ಥದಿಂದಲೂ ಇರಬಹುದು] ಬಿಳಿ ಹದ್ದುಗಳು, ಚಿನ್ನದಿಂದ ಮಾಡಿದ ಕೋಟುಗಳನ್ನು ಕಳುಹಿಸಿದನೆಂದು ಪ್ರವಾಸಿ ತಬರಿಯು ಬರೆಯುತ್ತಾನೆ. ಅದರಲ್ಲಿ ಈ ರಹಸ್ಯ ಪತ್ರಗಳ ರಹಸ್ಯ ಎಲ್ಲಿಯೂ ಬಹಿರಂಗವಾಗಬಾರದೆಂದು ಸೂಚಿಸಿದ್ದನು. ಅದಕ್ಕೆ ಪ್ರತಿಯಾಗಿ ಪರ್ಶಿಯಾದ ಖುಸ್ರುವು ತನ್ನ ರಾಯಭಾರಿಗಳನ್ನು ಸಮುದ್ರ ಮಾರ್ಗವಾಗಿಯೇ ಕಳುಹಿಸಿದ್ದನೆಂದು ಬಿ.ಎ.ಸಾಲೆತೊರೆ ಅಭಿಪ್ರಾಯಪಟ್ಟಿದ್ದಾರೆ. (ಸಾಲೆತೊರೆ ಬಿ.ಎ.: ಇಂಡಿಯನ್ ಡಿಪ್ಲೊಮ್ಯಾಟಿಕ್ಸ್ ರಿಲೇಷನ್ಸ್ ವಿತ್ ದಿ ಈಸ್ಟ್, (1960) ಬಾಂಬೆ. ಪುಟ.187; ಡಾ.ಲ.ನಾ.ಸ್ವಾಮಿಯವರ ಬಾದಾಮಿ ಚಾಲುಕ್ಯರ ಸಾಗರೋತ್ತರ ಚಟುವಟಿಕೆಗಳು.) ಪುಲಿಕೇಶಿಯು ಬರೆಯಿಸಿದ ಪತ್ರದ ಭಾಷೆ ತಿಳಿಯದೇ ಹೋದಾಗ ಖುಸ್ರುವು ಭಾರತೀಯ ಲಿಪಿಗಾರರನ್ನು ಬರಮಾಡಿಕೊಂಡು ರಹಸ್ಯ ಪತ್ರಗಳನ್ನು ಓದಿಸಿದನು. ಅದರಲ್ಲಿ ಸಿರಿಯನಿಗೆ "ನೀನು ಸಂತೋಷವಾಗಿರು, ಎದೆಗುಂದಬೇಡ, ಖುಸ್ರುವು ತನ್ನ 38ನೇ ಅಧಿಕಾರದ ವರ್ಷದಲ್ಲಿ [ಕ್ರಿ.ಶ.628] ಮೃತನಾಗುವನು. ಅವನ ನಂತರ ಅವನ ಮಗನಾದ ನೀನು ಆ ಭಾಗದ ದೊರೆಯಾಗುವೆ" ಎಂದು ಬರೆಯಿಸಿದ್ದನು. (ರಾ. ಸಾ.ಪಂಚಮುಖಿ : ಕರ್ನಾಟಕ ಇತಿಹಾಸ, ಪು.167) ಇದರಿಂದ ಪುಲಿಕೇಶಿಯು ಓರ್ವ ಜ್ಯೋತಿಷ್ಯಶಾಸ್ತ್ರದ ಪಂಡಿತನಾಗಿಯೂ ಇದ್ದನೆಂದು ತಿಳಿಯುತ್ತದೆ. ಈ ಪತ್ರದ ಸಾರವನ್ನು ತಿಳಿದ ಕೂಡಲೇ ಪರ್ಶಿಯಾದಲ್ಲಿ ರಾಜಕೀಯ ಗೊಂದಲ ಸೃಷ್ಟಿಯಾಗುತ್ತದೆ. ಇದರಿಂದ ಭಯಗೊಂಡ ಪರ್ಶಿಯಾದ ಅರಸ ಭಾರತೀಯ ವರ್ತಕರ ಮೇಲಿನ ಎಲ್ಲಾ ವ್ಯಾಪಾರಿ ನಿರ್ಬಂಧನೆಗಳನ್ನು ರದ್ದುಪಡಿಸಿ ಅವರಿಗೆ ವ್ಯಾಪಾರದಲ್ಲಿ ಸ್ವಾತಂತ್ರ್ಯವನ್ನು ನೀಡಿದನು. ಇದರಿಂದ ಪುಲಿಕೇಶಿಯ ಪ್ರಾಬಲ್ಯ ಮತ್ತು ಸಮುದ್ರಾಚೆಯಿರುವ ಹೊರನಾಡುಗಳಲ್ಲಿಯೂ ಎಷ್ಟೊಂದು ಪ್ರಭಾವ ಬೀರಿತ್ತು ಮತ್ತು ಯಾವ ಮಟ್ಟಿಗೆ ವಿದೇಶಿಗರಲ್ಲಿ ಭಯ ಹುಟ್ಟಿಸಿತ್ತು ಎಂಬುದು ತಿಳಿದುಬರುತ್ತದೆ. ಆದಕಾರಣ ಪುಲಿಕೇಶಿಯನ್ನು 'ವಿಶ್ವನಾಯಕ ಸಾಮ್ರಾಟ' ಎಂದು ಕರೆಯಬಹುದು. ಈ ವೇಳೆಗೆ ಪರ್ಶಿಯಾ ಮತ್ತು ರೋಮನ್ ಸಾಮ್ರಾಟರ (ಬೈಜಾಂಟಿನ್) ನಡುವೆ ಹೋರಾಟ ಮುಂದುವರೆದು ಇಮ್ಮಡಿ ಖುಸ್ರುವು ತನ್ನ ಮಗನಿಂದಲೇ ಕ್ರಿ.ಶ.628ರಲ್ಲಿ

ಹತನಾಗುತ್ತಾನೆ. ಇದು ಪುಲಿಕೇಶಿಯು ಎಂಥ ದೂರದೃಷ್ಟಿಯನ್ನು ಹೊಂದಿದ್ದನು ಎಂಬುದನ್ನು ಸ್ಪಷ್ಟೀಕರಿಸುತ್ತದೆ.

ಕ್ರಿ.ಶ.628 ರಿಂದ 633ರ ನಾಲ್ಕು ವರ್ಷದ ಅವಧಿಯಲ್ಲಿ 12 ಜನ ರಾಜರು ಪರ್ಶಿಯಾ ನಾಡನ್ನು ಆಳಿಹೋದರು. ಈ ಕಾಲಘಟ್ಟದ ದೊರೆಗಳು ಹಿಂದೆ ಭಾರತೀಯ ವರ್ತಕರೊಂದಿಗೆ ಮಾಡಿಕೊಂಡ ಒಪ್ಪಂದದ ನಿಯಮಗಳನ್ನು ಮುರಿದು ಪುನಃ ವರ್ತಕರಿಗೆ ತೊಂದರೆಗಳನ್ನು ಕೊಡಲಾರಂಭಿಸಿದ್ದರು. ಆದಕಾರಣ ಪುಲಿಕೇಶಿಯು ತಮ್ಮ ವರ್ತಕರ ಮೇಲಾಗುತ್ತಿರುವ ದೌರ್ಜನ್ಯಗಳನ್ನು ತಡೆದು ಅವರನ್ನು ರಕ್ಷಿಸುವುದಕ್ಕಾಗಿ ಪರ್ಶಿಯನ್ ನಾಡಿನ ಮೇಲೆ ದಾಳಿ ನಡೆಸಿದ್ದನೆಂದು ದಾಖಲೆಗಳು ಹೇಳುತ್ತವೆ. ಮಹಮ್ಮದ ಪೈಗಂಬರರಿಂದ ಕ್ರಿ.ಶ.610ರ ಅವಧಿಯಲ್ಲಿ ಉದಯವಾದ ಇಸ್ಲಾಂ ಧರ್ಮವು ಅರಬ್ ನಾಡಿನಲ್ಲಿ ನಿಧಾನವಾಗಿ ಪ್ರಸಾರ ಹೊಂದುತ್ತ ಸಾಗುತ್ತದೆ. ಆದರೆ ಮಹಮ್ಮದ ಪೈಗಂಬರ ಅವರ (ಕ್ರಿ.ಶ.632ರಲ್ಲಿ) ಮರಣದ ತರುವಾಯ ಇಸ್ಲಾಂ ಧರ್ಮ ಪ್ರಸಾರದ ಜವಾಬ್ದಾರಿ ಒಂದನೇ ಖಲೀಫ ಅಬುಬಕರನ ಮೇಲೆ ಬೀಳುತ್ತದೆ.

ಕ್ರಿ.ಶ.633ರ ಅರಬ್ ದೇಶದ ಖಲೀಫನ ಅನುಯಾಯಿಗಳು ಇರಾಕದ ಮೇಲೆ ದಾಳಿ ಪುನಃ ಮಾಡುತ್ತಾರೆ. ಈ ಅವಧಿಯಲ್ಲಿ 2ನೇ ಖಲೀಫ ಉಮರ್ ತನ್ನ ವರದಿಯಲ್ಲಿ ಇರಾಕದ ಮೇಲೆ ನಿರಂತರವಾಗಿ ಆಲ್‌ಹಿಂದನ [ಪುಲಿಕೇಶಿ] ರಾಜನು ದಾಳಿ ಮಾಡುತ್ತಾನೆಂದು ದಾಖಲಿಸಿದ್ದಾನೆ. ಇದೇ ವರ್ಷ ಜೂನ್ ತಿಂಗಳು ಪೆನಿಸುಲಾ ಭಾಗದ ಮೇಲೆ ಎರಡನೇ ಖಲೀಫ ಉಮರ್‌ನ ದಂಡನಾಯಕ ಖಾಲೀದ್ ಎಂಬಾತನು ದಾಳಿಯಿಟ್ಟು ಅದನ್ನು ತನ್ನ ಕೈವಶ ಮಾಡಿಕೊಂಡನು. ಇನ್ನೊಂದು ಕಡೆಯಿಂದ ಬಾದಾಮಿ ಚಾಲುಕ್ಯ ಚಕ್ರವರ್ತಿಯ ಸೈನ್ಯವು ಪರ್ಶಿಯನ್ನರ ಅಧೀನದಲ್ಲಿರುವ 'ನಹರ' ಪ್ರದೇಶದ ಮೇಲೆ ದಾಳಿಯಿಟ್ಟು ಅಲ್ಲಿ ಖಲೀಫರು ಕಟ್ಟಿಕೊಂಡಿದ್ದ ಶಿಬಿರಗಳನ್ನು ಧ್ವಂಸಗೊಳಿಸುತ್ತದೆ. ಈ ದಾಳಿಯ ಹೊಡೆತದಿಂದ ಭಯಗೊಂಡ ಖಲೀಫನು ತನ್ನ ಅನುಯಾಯಿಗಳಿಗೆ 'ಭೂಮಾರ್ಗದ ಮೂಲಕ ಅಲ್ಲಿಂದ ಪಲಾಯನ ಮಾಡಿ 15 ಕಿ.ಮೀ ದೂರಕ್ಕೆ ಬರಬೇಕು ಹಾಗೂ ಅಲ್ಲಿ ನಮ್ಮ ರಕ್ಷಣೆಗಾಗಿ ಒಂದು ಕೋಟೆಯನ್ನು ಕಟ್ಟಿಕೊಳ್ಳಬೇಕೆಂದು' ಆದೇಶಿಸುತ್ತಾನೆ. ಅದರ ಫಲವೇ ಪ್ರಸ್ತುತ ಇರಾಕಿನ ವಾಣಿಜ್ಯ ನಗರವೆಂದೇ ಪ್ರಸಿದ್ಧವಾದ ಬಾಸ್ರಾನಗರ. ಇದು ದಕ್ಷಿಣ ಇರಾಕಿನಲ್ಲಿರುವ ಬಂದರು ನಗರ ಮತ್ತು ಇರಾಕಿನ ಮೂರನೇ ಅತಿ ದೊಡ್ಡ ನಗರವಾಗಿದೆ. ಹೀಗೆ ಬಾಸ್ರಾನಗರದ ಉದಯಕ್ಕೆ ಕಾರಣವಾದವರೇ ಕನ್ನಡಿಗರು ಮತ್ತು ಪುಲಿಕೇಶಿಯ ದಾಳಿಗಳು. ಪರ್ಶಿಯನ್ ದೊರೆ ಕಾಲಾಂತರದಲ್ಲಿ ಕನ್ನಡಿಗರೊಂದಿಗಿನ ಯುದ್ಧಗಳನ್ನು ಕೊನೆಗೊಳಿಸಿ ಅವರೊಂದಿಗೆ ಶಾಂತಿ ಸಂಧಾನಕ್ಕೆಂದು ತಮ್ಮ ರಾಯಭಾರಿಯನ್ನು ಪುಲಿಕೇಶಿಯ ಆಸ್ಥಾನಕ್ಕೆ ಕಳುಹಿಸಿದನೆಂದು ತಿಳಿಯುತ್ತದೆ. ಇದನ್ನು ಅಜಂತಾದ ಗುಹಾಲಯದಲ್ಲಿರುವ ವರ್ಣಚಿತ್ರದ ಮೂಲಕ ತಿಳಿಯಬಹುದು.

ಖಲೀಫ ರಸುದ್ದೀನ ಮತ್ತು ಪರ್ಶಿಯನ್ನರ ನಡುವೆ ಯುಫ್ರೇಟಿಸ್ ನದಿಯ ತೀರದ ಮೇಲಿರುವ ಬ್ರಿಡ್ಜ್ ಎಂಬಲ್ಲಿ ಕ್ರಿ.ಶ.634 ರಲ್ಲಿ ಜರುಗಿದ ಕಾಳಗದಲ್ಲಿ ಪುಲಿಕೇಶಿಯು ಪರ್ಶಿಯನ್ನರ ಪರವಾಗಿ ತನ್ನ ಸೈನ್ಯವನ್ನು ಕಳುಹಿಸಿದ್ದನು. ಈ ಸೇನಾ ನೆರವಿನಿಂದಲೇ ಪರ್ಶಿಯನ್ನರು ವಿಜಯಶಾಲಿಗಳಾಗಿದ್ದರು ಎಂಬುದಕ್ಕೆ ಸಾಕ್ಷಿಯಿದೆ. ಅಂದರೆ ಆ ಹೋರಾಟದಲ್ಲಿ ಗಜಪಡೆಯ ಹೊಡೆತಕ್ಕೆ ಖಲೀಫನ ಸೈನ್ಯ ಸೋತು ರಣಾಂಗಣದಿಂದ ಕಾಲ್ತೆಗೆಯಿತು ಎಂಬ ವಿಷಯ ತಿಳಿಯುತ್ತದೆ. ಆ ಇರಾನ್ ಭಾಗದಲ್ಲಿ ಆನೆಗಳೇ ದೊರೆಯುವುದಿಲ್ಲ ಹಾಗಾಗಿ ಬಹುಶಃ ಪುಲಿಕೇಶಿ ಕೊಟ್ಟಿರುವ ಆನೆಗಳ ಸಹಾಯವೇ ಈ ಹೋರಾಟದಲ್ಲಿ ವಿಜಯ ಪತಾಕೆ

ಹಾರಿಸಲು ಖುಸ್ರುವಿನ ಯೋಧರಿಗೆ ಪೂರಕವಾಯಿತೆಂದು ಹೇಳಬಹುದು. ಮುಖ್ಯವಾಗಿ ಫಮನ್, ಪರ್ಶಿಯನ್ ಮತ್ತು ಅಲ್‌ಹಿಂದ್ ಈ ಮೂರೂ ಸೇನಾಪಡೆಯ ಮೈತ್ರಿಕೂಟವೇ ವಿಜಯಕ್ಕೆ ಸಂಕೇತವೆಂದು ಇತಿಹಾಸ ಸಂಶೋಧಕ ಭುವನೇಶ್ವರ ಅವರ ಹೇಳಿಕೆಯಾಗಿದೆ.

ಕ್ರಿ.ಶ 636ರಲ್ಲಿ 'ಕೊದಿಶೀಯಾ' ಎಂಬಲ್ಲಿ ಯುದ್ಧ ಜರುಗಿತು. ಈ ಅವಧಿಯಲ್ಲಿ ಪರ್ಶಿಯನ್ನರು ಒಂದು ಲಕ್ಷ ಜನರ ಸೈನ್ಯವನ್ನು ಕಳೆದುಕೊಂಡಿತು. ಅಲ್ಲದೇ ಈ ಅವಧಿಯಲ್ಲಿ ಓಮನ್ ದೇಶ ರಸುದ್ಧೀನ ಖಲೀಫನಿಗೆ ಶರಣಾಗಿರುತ್ತದೆ. ಹೀಗೆ ಮೈತ್ರಿಕೂಟದಲ್ಲಿ ಎರಡು ದೇಶಗಳ ಸೇನಾಪಡೆ ಸೋತು ಪಲಾಯನಗೈದವು. ಆ ಭೀಕರ ಯುದ್ಧದಲ್ಲಿ ಉಳಿದದ್ದು ಪುಲಿಕೇಶಿಯ ಸೈನ್ಯವೊಂದೆ. ಆಗ ಓಮನ್ ದೊರೆ ರಸುದ್ಧೀನ್ ಖಲೀಫ್ "ನಮ್ಮ ನಾಡಿನಲ್ಲಿ ಪುಲಿಕೇಶಿಯನ್ನು ಸೋಲಿಸುವುದರ ಬದಲಾಗಿ ಅವರ ನಾಡಿನಲ್ಲಿಯೇ ಅವರನ್ನು ಸೋಲಿಸಬೇಕು" ಎಂದು ತೀರ್ಮಾನ ಮಾಡಿಕೊಂಡು ಮುಂಬೈ ಬಳಿಯ ಠಾಣಾಗೆ ಮುತ್ತಿಗೆ ಹಾಕಿದನು. ಆದರೆ ಅಲ್ಲಿಯೂ ಸಹ ಕರ್ನಾಟಕ ಬಲದ ಹೊಡೆತಕ್ಕೆ ಇಸ್ಲಾಂ ಸೈನ್ಯ ಸೋತು ರಣಾಂಗಣದಿಂದಲೇ ಪಲಾಯನ ಮಾಡಿ ಬ್ರೋಚ್ ನಗರಕ್ಕೆ ತಲುಪಿತು. ನಗರವು ಆ ಅವಧಿಯಲ್ಲಿ ಪುಲಿಕೇಶಿಯ ಸಾಮಂತರಾದ ಲಾಟರ ನಿಯಂತ್ರಣದಲ್ಲಿತ್ತು. ಬ್ರೋಚ್‌ದಲ್ಲಿಯೂ ಖಲೀಫನ ಸೈನ್ಯವು ಚಾಲುಕ್ಯ ಬೆಂಬಲಿತ ಲಾಟರಿಂದ ಸೋತು ತಾಯ್ನಾಡಿನತ್ತ ಓಡಿಹೋಯಿತು. ಕಾಲಾಂತರದಲ್ಲಿ ಪುಲಿಕೇಶಿಯ ಮೊಮ್ಮಗನಾದ ವಿನಯಾದಿತ್ಯನು ಪರ್ಶಿಯಾದಿಂದ ಕರ್ನಾಟಕಕ್ಕೆ ಬಂದು ನೆಲೆಸಲು ಪರ್ಶಿಯನ್ನರಿಗೆ ಆಶ್ರಯ ನೀಡಿದನು. ಇದರ ಫಲವೇ ಇಂದಿಗೂ ಪರ್ಶಿಯನ್ನರು ನಮ್ಮ ನಾಡಿನಲ್ಲಿ ಆಶ್ರಯದಲ್ಲಿದ್ದಾರೆ. ಇದಕ್ಕೆ ಪ್ರಮುಖ ಕಾರಣವೆಂದರೆ ಇಮ್ಮಡಿ ಪುಲಿಕೇಶಿಯ ರಾಜನೀತಿ ನೈಪುಣ್ಯತೆ ಹಾಗೂ ಚಾಲುಕ್ಯರು ಮತ್ತು ಪರ್ಶಿಯನ್ನರ ನಡುವೆ ಸ್ಥಾಪಿತವಾದ ಸ್ನೇಹತ್ವದ ಸಂಬಂಧ. ಇದಲ್ಲದೇ ಎರಡು (ಏಷಿಯಾ ಮತ್ತು ಯುರೋಪ) ಖಂಡಗಳ ನಾಲ್ಕು (ಹಿಂದೂ, ಜೊರಾಷ್ಟ್ರಿಯನ್, ಇಸ್ಲಾಂ ಮತ್ತು ಕ್ರಿಶ್ಚಿಯನ್) ಧರ್ಮಗಳ ಸಮ್ಮಿಲನಕ್ಕೆ ಪುಲಿಕೇಶಿಯ ಉದಾರತೆ ಹಾಗೂ ಧರ್ಮಸಮನ್ವಯತೆಯ ಭಾವನೆಗಳೇ ಕಾರಣ ಎಂದು ಹೇಳಬಹುದು. ಪುಲಿಕೇಶಿಯ ಆಳ್ವಿಕೆಯ ಅಂತ್ಯದವರೆಗೂ ಮತ್ತೆಂದೂ ಅರಬ್ಬರು ಕನ್ನಡ ನಾಡಿನ ಕಡೆಗೆ ತಲೆ ಹಾಕಿಯು ಮಲಗಿರುವುದಿಲ್ಲ ಎಂದು ಪರ್ಷಿಯನ್ ಇತಿಹಾಸಕಾರನಾದ ಅಹ್ಮದ-ಇಬ್ಯಾಹ್ಯಾ ಆಲ್ ಬುಲಾದ್ ಎಂಬವರಿಂದ ರಚಿತವಾದ 'ಕಿತಾಬ್ ಫೇತ್-ಆಲ್-ಬುಲ್ದನ್' ಗ್ರಂಥದಲ್ಲಿ ವಿವರವಾಗಿ ದಾಖಲಾಗಿದೆ. ಕರ್ನಾಟಕದ ಸಾಮ್ರಾಟನಾದ ಪುಲಿಕೇಶಿಯು ಪರ್ಶಿಯಾದ ಸುಲ್ತಾನ ಎರಡನೆಯ ಖುಸ್ರುವಿನ ಆಸ್ಥಾನಕ್ಕೆ ತನ್ನ ರಾಯಭಾರಿಗಳನ್ನು ಸಮುದ್ರದ ಮಾರ್ಗವಾಗಿ ಕಳುಹಿಸಿದ್ದನೆಂದು ಇತಿಹಾಸಕಾರ ಬಿ.ಎ. ಸಾಲೆತೊರೆಯವರು ಅಭಿಪ್ರಾಯಪಟ್ಟಿದ್ದಾರೆ. ಇಮ್ಮಡಿ ಪುಲಿಕೇಶಿಯು ಸಮುದ್ರಮಾರ್ಗದ ಮೇಲೆ ಹೊಂದಿದ್ದ ಪ್ರಭುತ್ವ ವಿಶಿಷ್ಟವಾದುದು. ಏಕೆಂದರೆ ಭೂಮಾರ್ಗದ ಮೇಲೆ ಆತನು ಸಂಪರ್ಕ ಹೊಂದಿರಲಿಲ್ಲ. ಆದಕಾರಣ ಸುರಕ್ಷಿತವಾದ ಜಲಮಾರ್ಗದ ಮೂಲಕವೇ ಈ ರಾಯಭಾರ ಸಂಬಂಧವನ್ನು ಬೆಳೆಸಿದನೆಂದು ಅವರು ಅಭಿಪ್ರಾಯವನ್ನು ಪಟ್ಟಿದ್ದಾರೆ.

**ಸಮಾರೋಪ:**

ಇಮ್ಮಡಿ ಪುಲಿಕೇಶಿ ಮತ್ತು ಅರಬ್ಬರ ಸಂಬಂಧದ ಅಧ್ಯಯನದಿಂದ ಅವರ ಕಾಲದ ರಾಜಕೀಯ ವೈಮನಸ್ಸು, ಹೋರಾಟ ನಂತರ ರಾಜತಾಂತ್ರಿಕ ಸಂಬಂಧ, ಆರ್ಥಿಕ ಹಾಗೂ ಸಾಂಸ್ಕೃತಿಕ ಬೆಳವಣಿಗೆ ಚಿತ್ರಣ ದೊರೆಯುತ್ತದೆ. ಪುಲಿಕೇಶಿಯ ಶಕ್ತಿಯುತ ಆಡಳಿತ ವಿದೇಶಗಳಲ್ಲಿರುವ ವೈರಿಗಳಿಗೆ ಮೂಡಿಸಿದ ಭಯ, ವ್ಯಾಪಾರಿಗಳಲ್ಲಿ ಮೂಡಿಸಿದ ಉತ್ಸಾಹ, ಸುರಕ್ಷಿತ ವಾತಾವರಣವನ್ನು ಸೃಷ್ಟಿಸಿತು, ಅರಬ್ಬ ವ್ಯಾಪಾರಿಗಳಿಗೆ ಭಾರತ ಆಕರ್ಷಕ

ಕೇಂದ್ರವಾಗಿಸಿತು. ಇವರ ಸಂಬಂಧಗಳು ಇಬ್ಬರ ನಡುವೆ ಪರಸ್ಪರ ಪ್ರಯೋಜನಾತ್ಮಕವಾದ ವಿನಿಮಯಕ್ಕೆ ಕಾರಣವಾಗಿದ್ದು ಹಳೆಯ ಜಗತ್ತಿನ ವ್ಯಾಪಾರದ ಮಾರ್ಗಗಳಿಗೆ ಹೊಸ ಚೈತನ್ಯವನ್ನು ನೀಡಿದವು. ಇಂತಹ ಸಾಂಸ್ಕೃತಿಕ ಹಾಗೂ ವಾಣಿಜ್ಯ ಸಂಪರ್ಕಗಳು ಭಾರತದ ಚರಿತ್ರೆಯಲ್ಲಿ ಮಹತ್ವದ ಸ್ಥಾನ ಹೊಂದಿದ್ದು ವಿವಿಧ ಸಮಾಜಗಳ ನಡುವೆ ಸ್ನೇಹ ಮತ್ತು ಸಹಕಾರದ ಸೇತುವಾಗಿ ಪರಿಣಮಿಸಿವೆ.

**ಪರಾಮರ್ಶನ ಗ್ರಂಥಗಳು:**


1. ಬುಳ್ಳಾ ನಿಂಗೇಶ : ಇಮ್ಮಡಿ ಪುಲಿಕೇಶಿ ಐತಿಹಾಸಿಕ ನಾಟಕ, ಸ್ವಾಗತ ಸಮಿತಿ, ಅಖಿಲ ಭಾರತ 68ನೇ ಸಾಹಿತ್ಯ ಸಮ್ಮೇಳನ, ಬಾಗಲಕೋಟ, 2000
2. ಶ್ರೀನಿವಾಸರಾವ್ ಎಸ್.ವಿ. : ಇಮ್ಮಡಿ ಪುಲಿಕೇಶಿ, ರಾಷ್ಟ್ರೋತ್ಥಾನ ಸಾಹಿತ್ಯ ಕೆಂಪೆಗೌಡ ನಗರ, ಬೆಂಗಳೂರು, 2020
3. ಷೇಕ್‌ಅಲಿ.ಬಿ.&ಸುಂದರ ಅ. (ಸಂ): ಕರ್ನಾಟಕ ಚರಿತ್ರೆ ಸಂ–1, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2018.
4. ಷ.ಶೆಟ್ಟರ : ಹಳಗನ್ನಡ (ಲಿಪಿ, ಲಿಪಿಕಾರ, ಲಿಪಿ ವ್ಯವಸಾಯ), ಅಭಿನವ ಪ್ರಕಾಶನ, ಬೆಂಗಳೂರು
5. ಪ್ರಕಾಶ ಹೇಮಾವತಿ : ಇಮ್ಮಡಿ ಪುಲಿಕೇಶಿ (ಐತಿಹಾಸಿಕ ಕಾದಂಬರಿ), ದಿವ್ಯಾ ಪ್ರಕಾಶನ ನಾಗಪ್ಪಬೀದಿ, ಶೇಷಾದ್ರಿಪುರ, ಬೆಂಗಳೂರು, 2021 .
6. ಪಂಚಮುಖಿ. ರಾ.ಸ್ವಾ : ಕರ್ನಾಟಕ ಇತಿಹಾಸ ಸಂಪುಟ.1, ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ, ಧಾರವಾಡ. 2007–08
7. ಕೌಂಡಿನ್ಯ : ಚಾಲುಕ್ಯ ಪರಮೇಶ್ವರ (ಅಖಂಡ ಕರ್ನಾಟಕ ಸಾಧಕನ ಸಾಹಸ ಚರಿತ್ರೆ ಕಾದಂಬರಿ), ಚರಿತ್ರೆ ಪಬ್ಲಿಕೇಷನ್ಸ್, ಸೋಮೇಶ್ವರ, ಚಿಕ್ಕಬಳ್ಳಾಪುರ, 2023.
8. ದೇವರಕೊಂಡಾರೆಡ್ಡಿ (ಸಂ) : ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ.9, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006
9. ಎಫಿಗ್ರಾಫಿಕಾ ಇಂಡಿಕಾ ಸಂಪುಟಗಳು:ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
10. ಮುರುಗೆಪ್ಪ ಎ. (ಸಂ) : ಬಾದಾಮಿ ಚಾಲುಕ್ಯರು, ಲೇಖನ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2009



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.